9) ವಿಷಯ : ರಾಜ್ಯದಲ್ಲಿ ಮಲ ಹೊರುವ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧಿಸುವ ಬಗ್ಗೆ.

*****

ಶ್ರೀ ಜೆ.ಆರ್. ಲೋಬೋ (ಮಂಗಳೂರು ನಗರ ದಕ್ಷಿಣ):– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಮಲ ಹೊರುವ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧಿಸುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

ಅಧ್ಯಕ್ಷರು:– ನಿಮ್ಮ ಪ್ರಶ್ನೆಗೆ ಉತ್ತರ ಬಂದಿಲ್ಲ ಹಾಗೂ ಸಂಬಂಧಪಟ್ಟ ಮಂತ್ರಿಗಳು ಕೂಡ ಬಂದಿಲ್ಲವಾದ್ದರಿಂದ ಈ ವಿಷಯವನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಜೆ.ಆರ್. ಲೋಬೋ:– ಈ ತಿಂಗಳ ಮೂರನೇ ತಾರೀಖಿಗೆ 2011ರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಜಾತಿ ಗಣತಿಯ ವಿವರಗಳು ಬಿಡುಗಡೆಯಾಗಿದ್ದು, ಆ ಪ್ರಕಾರ ನಮ್ಮ ಕರ್ನಾಟಕ ರಾಜ್ಯದಲ್ಲಿ 15375 ಪ್ರಕರಣಗಳು ಆಗಿವೆ.

ಅಧ್ಯಕ್ಷರು:– ಉತ್ತರ ಬಂದಿಲ್ಲ, ಮಂತ್ರಿಗಳು ಬಂದಿಲ್ಲ.

ಶ್ರೀ ಜೆ.ಆರ್. ಲೋಬೋ:– ಇದು ಬಹಳ ಗಂಭೀರವಾದ issue ಆಗಿದೆ.

ಅಧ್ಯಕ್ಷರು:– ಹೇಳುವವರೇ ಇಲ್ಲವಲ್ಲಾ! ನಾನಂತೂ ಉತ್ತರ ಹೇಳುವುದಕ್ಕಾಗುವುದಿಲ್ಲ. ಇದನ್ನು ನಾಳೆ ಅಥವಾ ನಾಡಿದ್ದು ಹಾಕಿಕೊಡುತ್ತೇನೆ. ಮಂತ್ರಿಗಳೇ ಉತ್ತರ ಬಂದಿದೆಯೇ?

ಶ್ರೀ ಜೆ.ಆರ್. ಲೋಬೋ:– ಉತ್ತರ ನನಗೇ ಬಂದಿಲ್ಲ.

ಅಧ್ಯಕ್ಷರು:– ಸಚಿವರ ನಮಗ ಉತ್ತರ ಬಂಟಿದ್ದರ ಹೇಳ.

ಶ್ರೀ ಬಿ. ರಮಾನಾಥ್ ರೈ (ಮಾನ್ಯ ಅರಣ್ಯ ಮತ್ತು ಪರಿಸರ ಸಚಿವರು) (ಮಾನ್ಯ ಸಮಾಜ ಕಲ್ಯಾಣ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಶಾಸಕರ ಗಮನ ಸೆಳೆಯುವ ಸೂಚನೆಗೆ ಉತ್ತರವನ್ನು ಒದಗಿಸುತ್ತೇನೆ.

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮಲ ಹೊರವ ಪದ್ಧತಿಯನ್ನು ನಿಷೇಧಿಸಿದ್ದು. ಈ ಕೆಳಕಂಡಂತೆ ಕ್ರಮ ವಹಿಸಲಾಗಿರುತ್ತದೆ.

- ಕೇಂದ್ರ ಸರ್ಕಾರವು 1993 ರಲ್ಲಿ "The Employment of Manual Scavengers and Construction of Dry Latrines (prohibition) Act, 1993" ನ್ನು ಜಾರಿಗೆ ತಂದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಅಧಿಸೂಚನೆ ಸಂಖ್ಯೆ: UDD 188 CSL 95, ದಿನಾಂಕ: 16.07.1996 ನ್ನು ಹೊರಡಿಸಿದ್ದು, ಅದರಂತೆ ರಾಜ್ಯದ ನಗರಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಒಣ ಶೌಚಾಲಯಗಳನ್ನು ನಿರ್ಮಿಸುವುದು, ನಿರ್ವಹಿಸುವುದು ಹಾಗೂ ಕೆಲಸಗಾರರು ತಮ್ಮ ಕೈಗಳಿಂದ ಅವುಗಳನ್ನು ಸ್ವಚ್ಛಗೊಳಿಸುವುದನ್ನು ನಿಷೇಧಿಸಲಾಗಿತ್ತು.
- ನಂತರ ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ ದಿನಾಂಕ: 19.09.2013 ರಂದು 'The Prohibition of Employment as Manual Scavengers and their Rehabilitation Act, 2013' ನ್ನು (ಪರಿಷ್ಕೃತ ಕಾಯ್ದೆ) ಜಾರಿಗೆ ತಂದಿದ್ದು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಅಧಿಸೂಚನೆ ಸಂಖ್ಯೆ: SWD 237 SDC 2012 (3), ಬೆಂಗಳೂರು dated: 03.05.2014 ಹೊರಡಿಸಿದ್ದು, ಅದರ ರೀತ್ಯ ರಾಜ್ಯದ ನಗರಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮಲ ಹೊರುವ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.
- ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಯಾವುದೇ ವ್ಯಕ್ತಿ, ಸ್ಥಳೀಯ ಪ್ರಾಧಿಕಾರ/ಸಂಸ್ಥೆಯು, ಒಳಚರಂಡಿ ಅಥವಾ ಸೆಪ್ಟಿಕ್ ಟ್ಯಾಂಕ್‌ಗಳ ಅಪಾಯಕಾರಿ ಸ್ವಚ್ಛತೆಯನ್ನು (Hazardous Cleaning) ಮಾಡಲು ಯಾವುದೇ ವ್ಯಕ್ತಿಯನ್ನು ನೇರವಾಗಿ ಅಥವಾ

ಪರೋಕ್ಷವಾಗಿ ನೇಮಿಸಿಕೊಳ್ಳದಂತೆ ಅಥವಾ ತೊಡಗಿಸಿಕೊಳ್ಳದಂತೆ ಸೂಚಿಸಲಾಗಿರುತ್ತದೆ. ಎಲ್ಲಾ ಸ್ಥಳೀಯ ಸಂಸ್ಥೆಗಳು, ತಮ್ಮ ವ್ಯಾಪ್ತಿಯಲ್ಲಿ ಮಲಮೂತ್ರಗಳನ್ನು ಕೆಲಸಗಾರರು ಬರಿಗೈಯಿಂದ ಸ್ವಚ್ಛ ಮಾಡುವುದನ್ನು ತಡೆಗಟ್ಟುವವ ದೃಷ್ಟಿಯಿಂದ, ಒಳಚರಂಡಿ, ಸೆಪ್ಟಿಕ್ ಟ್ಯಾಂಕ್‌ಗಳು ಹಾಗೂ ಇತರೆ ಜಾಗಗಳನ್ನು ಸೂಕ್ತ ತಾಂತ್ರಿಕ ಸಲಕರಣೆಗಳನ್ನು ಬಳಸಿ ಸ್ವಚ್ಛ ಮಾಡಲು ಸೂಚಿಸಲಾಗಿರುತ್ತದೆ.

- ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ನಗರಸ್ಥಳೀಯ ಸಂಸ್ಥೆಗಳಲ್ಲಿ ಸೆಪ್ಟಿಕ್ ಟ್ಯಾಂಕ್ ಹಾಗೂ ಒಳಚರಂಡಿಗಳನ್ನು ಯಾಂತ್ರೀಕೃತವಾಗಿ ಸ್ವಚ್ಛಗೊಳಿಸಲು, ಆಧುನಿಕ ಮಾದರಿಯ ಸಕ್ಕಿಂಗ್ ಅಂಡ್ ಜೆಟ್ಟಿಂಗ್ ಯಂತ್ರಗಳನ್ನು ಮಂಜೂರು ಮಾಡಲಾಗಿದ್ದು ಪ್ರಸ್ತುತ ಎಲ್ಲಾ ನಗರಸ್ಥಳೀಯ ಸಂಸ್ಥೆಗಳಲ್ಲಿ ಸದರಿ ಯಂತ್ರೋಪಕರಣಗಳನ್ನು ಖರೀದಿಸಲಾಗಿರುತ್ತದೆ.
- ಈ ಬಗ್ಗೆ ಸಾಕಷ್ಟು ಪ್ರಚುರ ಪಡಿಸಲು ವಾರ್ತಾ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಯುವಜನ ಸೇವಾ ಇಲಾಖೆ ಹಾಗೂ ಆರೋಗ್ಯ ಇಲಾಖೆಗಳ ಜಂಟಿ ಸಹಭಾಗಿತ್ವದಲ್ಲಿ ತೀವ್ರ ಆಂದೋಲನವನ್ನು ಹಮ್ಮಿಕೊಳ್ಳಲು ಸೂಚಿಸಲಾಗಿರುತ್ತದೆ. ರಾಜ್ಯಮಟ್ಟದ ಮತ್ತು ಸ್ಥಳೀಯ ಪತ್ರಿಕೆಗಳಲ್ಲಿ ಹಾಗೂ ಟಿವಿ ಚಾನೆಲ್‌ಗಳಲ್ಲಿ ಜಾಹಿರಾತು ನೀಡುವುದು, ಕರಪತ್ರ ಹಂಚುವುದು ಮುಂತಾದ ಸಾಧ್ಯವಿರುವ ಎಲ್ಲಾ ಪ್ರಚಾರ ಪರಿಕರ ಬಳಸಿಕೊಂಡು ದೊಡ್ಡಮಟ್ಟದಲ್ಲಿ ಜನಜಾಗೃತಿ ಮೂಡಿಸಲು ಕ್ರಮವಹಿಸಲು ಸೂಚಿಸಿದೆ.
- ಅಲ್ಲದೆ ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಯು ಅಧಿಸೂಚನೆ ಸಂಖ್ಯೆ: ನಅಇ 04 ಯುಡಿಎಸ್ 2012, ಬೆಂಗಳೂರು; ದಿನಾಂಕ 15.05.2013 ರಂತೆ ಒಳಚರಂಡಿ ನಿರ್ಮಾಣ ಮತ್ತು ನಿರ್ವಹಣೆ ವಿಷಯದಲ್ಲಿ ಅನುಸರಿಸಬೇಕಾದ ಅಂತಿಮ ರಕ್ಷಣಾ ಸೂತ್ರಗಳ ಕೈಪಿಡಿಯನ್ನು ಸಿದ್ಧಪಡಿಸಿ, ಅದನ್ನು

ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿರುತ್ತದೆ ಹಾಗೂ ರಕ್ಷಣಾ ಸೂತ್ರಗಳ ಕೈಪಿಡಿಯ ಪ್ರತಿಗಳನ್ನು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು, ನಗರಸ್ಥಳೀಯ ಸಂಸ್ಥೆಗಳಿಗೆ ಒದಗಿಸಲಾಗಿದೆ.

- ಈ ಹಿಂದೆ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ವೃತ್ತಿಯಲ್ಲಿ ತೊಡಗಿದವರನ್ನು ಗುರುತಿಸಿ ಪುನರ್ವಸತಿ ಕಲ್ಪಿಸಲು ರಾಜ್ಯದ ನಗರಸ್ಥಳೀಯ ಸಂಸ್ಥೆಗಳಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಹಾಗೂ ಇನ್‌ಸ್ಯಾನಿಟರಿ ಲೆಟ್ರೀನ್‌ಗಳ ಅಸ್ತಿತ್ವದ ಕುರಿತಾಗಿ ರಾಜ್ಯ ವ್ಯಾಪಿ ಸಮೀಕ್ಷೆ ಕೈಗೊಂಡಿದ್ದು, ಸಮೀಕ್ಷೆಯಲ್ಲಿ 302 ಜನ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳನ್ನು ಗುರುತಿಸಲಾಗಿರುತ್ತದೆ.

ಜಿಲ್ಲೆಯ ಹೆಸರು	ನಗರಸ್ಥಳೀಯ ಸಂಸ್ಥೆಯ ಹೆಸರು	ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳ ಸಂಖ್ಯೆ
ಬೆಂಗಳೂರು ನಗರ	ಬೃಹತ್ ಬೆಂಗಳೂರು ಮಹಾನಗರಪಾಲಿಕೆ	202
ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ ನಗರಸಭೆ	7
ಕೋಲಾರ	ಶ್ರೀನಿವಾಸಪುರ ಪುರಸಭೆ	4
	ಕೆ.ಜಿ.ಎಫ್. ನಗರಸಭೆ	87
ಕೊಪ್ಪಳ	ಗಂಗಾವತಿ ನಗರಸಭೆ	2
ಒಟ್ಟು		**302**

- ಕೇಂದ್ರ ಸರ್ಕಾರದ ಸದರಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ರವರಿಗೆ ಪುನರ್ವಸತಿ ಕಲ್ಪಿಸಲು ರಾಷ್ಟ್ರೀಯ ಸಫಾಯಿ ಕರ್ಮಚಾರಿ ಫೈನಾನ್ಸ್ ಆಂಡ್ ಡೆವೆಲಪ್‌ಮೆಂಟ್ ಕಾರ್ಪೋರೇಷನ್ (National Safai Karmacharis Finance and Development Corporation) ರ

ವತಿಯಿಂದ ಒಂದು ಬಾರಿಯ ಹಣ ಸಹಾಯ (One Time Cash Assistance) ₹ 40,000/– ಗಳನ್ನು ಈಗಾಗಲೇ 225 ಸಂಖ್ಯೆ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳಿಗೆ ನೀಡಲಾಗಿದೆ.

- ನಗರಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಹಾಗೂ ಅವರ ಅವಲಂಬಿತರಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸಲು ಸಲುವಾಗಿ ಗುರುತಿನ ಚೀಟಿ ನೀಡಲು, ಮನೆ ಕಟ್ಟಲು ನಿವೇಶನ ಹಂಚಿಕೆ ಮಾಡಲು. ಕೌಶಲ್ಯ ತರಬೇತಿ ನೀಡಲು, ವಿದ್ಯಾರ್ಥಿವೇತನ ಹಾಗೂ ಇತರೆ ಸೌಲಭ್ಯವನ್ನು ಕಲ್ಪಿಸಲು ಪೌರಾಡಳಿತ ನಿರ್ದೇಶನಲಾಯದಿಂದ ದಿನಾಂಕ 03.07.2014 ರಂದು ಎಲ್ಲಾ ಜಿಲ್ಲಾಧಿಕಾರಿಗಳು, ನಗರಸ್ಥಳೀಯ ಸಂಸ್ಥೆಯ ಮುಖ್ಯಸ್ಥರಿಗೆ ಸೂಚನೆ ನೀಡಲಾಗಿರುತ್ತದೆ.
- ರಾಜ್ಯ ಸರ್ಕಾರವು ಆದೇಶದ ಸಂಖ್ಯೆ: ಸಕಇ 375 ಎಸ್‌ಡಿಸಿ 2014, ಬೆಂಗಳೂರು ದಿನಾಂಕ 20.01.2015 ರೀತ್ಯ ಸದರಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳಿಗೆ ಪುನರ್ವಸತಿ ಹಾಗೂ ಬದಲಿ ಉದ್ಯೋಗ ಕಲ್ಪಿಸಲು ಒಂದು ಬಾರಿಯ ಹಣ ಸಹಾಯ (One Time Cash Assistant) ತಲಾ ₹ 1.00 ಲಕ್ಷ ಸಹಾಯಧನ ಸಮಾಜ ಕಲ್ಯಾಣ ಇಲಾಖೆ ಮುಖೇನ ನೀಡು ಕ್ರಮ ವಹಿಸಲಾಗಿದೆ.
- ಕರ್ನಾಟಕ ಸರ್ಕಾರ ಅಧಿಸೂಚನೆ ಹೊರಡಿಸಿದ್ದ, ಅಧಿಸೂಚನೆ ಸಂಖ್ಯೆ: SWD 237 SDC 2012 (3) ಬೆಂಗಳೂರು dated: 03.05.2014 ಅದರ ರೀತ್ಯಾ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಎಲ್ಲಾ ಮಹಾನಗರಪಾಲಿಕೆಯ ಆಯುಕ್ತರು, ಎಲ್ಲಾ ನಗರಸಭೆ ಪೌರಾಯುಕ್ತರು. ಎಲ್ಲಾ ಪುರಸಭೆ, ಪಟ್ಟಣ ಮಹಾನಗರ ಪಾಲಿಕೆಯ ಆಯುಕ್ತರು, ಎಲ್ಲಾ ನಗರಸಭೆ ಪೌರಾಯುಕ್ತರು, ಎಲ್ಲಾ ಪುರಸಭೆ, ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿಗಳನ್ನು ಸದರಿ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಿಸಗೊಳಿಸಲು

ಅಗತ್ಯ ಅಧಿಕಾರ ಮತ್ತು ಕರ್ತವ್ಯಗಳನ್ನು ಪ್ರತ್ಯಾಯೋಜಿಸಲಾಗಿರುತ್ತದೆ ಹಾಗೂ ಸದರಿ ಕಾಯ್ದೆಯ ಪರಿಣಾಮಕಾರಿ ಅನಷ್ಠಾನಕ್ಕಾಗಿ ಜಿಲ್ಲಾ ಮಟ್ಟದ ಹಾಗೂ ಉಪವಿಭಾಗೀಯ ಮಟ್ಟದ ವಿಚಕ್ಷಣ ಸಮಿತಿಗಳನ್ನು ರಚಿಸಿ ಆದೇಶ ಹೊರಡಸಲಾಗಿರುತ್ತದೆ. The Prohibition of Employment as Manual Scavengers and their Rehabilitation Act, 2013' ನ್ನು ರಾಜ್ಯದಲ್ಲಿ ಸಕ್ರಿಯವಾಗಿ ಅನುಷ್ಠಾನಿಸಲು ಸರ್ಕಾರದಿಂದ ಎಲ್ಲಾ ಅಗತ್ಯ ಕ್ರಮ ವಹಿಸಲಾಗುತ್ತಿದೆ.

ಅಧ್ಯಕ್ಷರು:– ಸದನದಲ್ಲಿರುವ ಸದಸ್ಯರಿಗೂ ಆ ಪ್ರತಿಯನ್ನು ಕೊಡಿ.

ಶ್ರೀ ಬಿ. ರಮಾನಾಥ್ ರೈ (ಮಾನ್ಯ ಅರಣ್ಯ ಸಚಿವರು) (ಮಾನ್ಯ ಸಮಾಜ ಕಲ್ಯಾಣ ಸಚಿವರ ಪರವಾಗಿ):– ಹಿಂದೆ manual scavenging ವೃತ್ತಿಯಲ್ಲಿ ತೊಡಗಿದವರನ್ನು ಗುರುತಿಸಿ, ಪುನರ್‌ವಸತಿ ಕಲ್ಪಿಸಲು ರಾಜ್ಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ manual scavengers ಹಾಗೂ insanitary latrıne ಗಳ ಅಸ್ತಿತ್ವದ ಕುರಿತಾಗಿ ರಾಜ್ಯ ವ್ಯಾಪ್ತಿ ಸಮೀಕ್ಷೆ ಕೈಗೊಂಡಿದ್ದು, ಸಮೀಕ್ಷೆಯಲ್ಲಿ 302 manual scavengers ನ್ನು ಗುರುತಿಸಲಾಗಿರುತ್ತದೆ. ಜಿಲ್ಲಾವಾರು ವಿವರಗಳನ್ನು ನೀಡಿರುತ್ತಾರೆ.

ಅಧ್ಯಕ್ಷರು:– ವಿವರಗಳನ್ನು ಹೇಳುವುದು ಬೇಡ. ಮಾನ್ಯ ಸದಸ್ಯರಿಗೆ ಕೊಟ್ಟಿದ್ದರೆ ಸರಿ. ಲೋಬೋ ಅವರೆ ನಿಮಗೆ ಉತ್ತರದ ಹೇಳಿಕೆ ಬಂದಿದೆಯೇ?

ಶ್ರೀ ಜೆ.ಆರ್. ಲೋಬೋ:– ಮಾನ್ಯ ಅಧ್ಯಕ್ಷರೆ, ಇಲ್ಲಿಯವರೆಗೆ ನನಗೆ ಉತ್ತರ ಬಂದಿರುವುದಿಲ್ಲ.

ಅಧ್ಯಕ್ಷರು:– ಕಳುಹಿಸಿಕೊಡುತ್ತೇವೆ.

ಶ್ರೀ ಬಿ. ರಮಾನಾಥ್ ರೈ:– ಕೇಂದ್ರ ಸರ್ಕಾರ manual scavengres ಗೆ ಪುನರ್‌ವಸತಿ ಕಲ್ಪಿಸಲು ರಾಷ್ಟ್ರೀಯ ಸಫಾಯಿ ಕರ್ಮಚಾರಿ ಫೈನಾನ್ಸ್ ಅಂಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ವತಿಯಿಂದ ಒಂದು ಬಾರಿ ಹಣ ಸಹಾಯ one time cash assistance 40,000 ರೂ. ಗಳ ಮಾಡಿದ್ದು, ಅದನ್ನು ಈಗಾಗಲೇ 270 manual scavengers ಅವರಿಗೆ ನೀಡಲಾಗಿದೆ.

ಅಧ್ಯಕ್ಷರು:– ಈ ಸ್ಟೇಟ್‌ಮೆಂಟ್ ಬರೆದವರು ಯಾರೋ, ಏನೋ?

ಶ್ರೀ ಬಿ. ರಮಾನಾಥ್ ರೈ:– ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಗುರುತಿಸಿದ manual scavengers ಹಾಗೂ ಅವರ ಅವಲಂಬಿತರಿಗೆ ಪುನರ್‌ವಸತಿ ಕಲ್ಪಿಸುವ ಸಲುವಾಗಿ ಗುರುತಿನ ಚೀಟಿ, ಮನೆ ಕಟ್ಟಲು ನಿವೇಶನ ಹಂಚಿಕೆ ಮಾಡಲು, ಕೌಶಲ್ಯ ತರಬೇತಿ ನೀಡಲು, ವಿದ್ಯಾರ್ಥಿವೇತನ ಹಾಗೂ ಇತರೆ ಸೌಲಭ್ಯಗಳನ್ನು ಕಲ್ಪಿಸಲು ಪೌರಾಡಳಿತ ನಿರ್ದೇಶನಾಲಯದಿಂದ ದಿನಾಂಕ 03.07.2014 ರಂದು ಎಲ್ಲಾ ಜಿಲ್ಲಾಧಿಕಾರಿಗಳು ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರಿಗೆ ಸೂಚನೆ ನೀಡಲಾಗಿರುತ್ತದೆ. ರಾಜ್ಯ ಸರ್ಕಾರದ ಆದೇಶ ಸಂಖ್ಯೆ: ಸಕಇ–375–ಎಸ್.ಬಿ.ಸಿ.–214/ಬೆಂಗಳೂರು, ದಿನಾಂಕ 02.01.2015 ರಲ್ಲಿ ಸದರಿ manual scavengers ಗೆ ಪುನರ್‌ವಸತಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಉತ್ತರ ಸ್ಪಷ್ಟವಾಗಿ, ನಿಖರವಾಗಿಲ್ಲದ ಸಂದರ್ಭದಲ್ಲಿ ಈ ರೀತಿಯ ಕಥೆಯನ್ನೆಲ್ಲಾ ಅಧಿಕಾರಿಗಳು ಬರೆದುಕೊಡುತ್ತಾರೆ.

ಶ್ರೀ ಬಿ. ರಮಾನಾಥ್ ರೈ:– ಮಾನ್ಯ ಸಮಾಜ ಕಲ್ಯಾಣ ಸಚಿವರು ನನಗೆ ಉತ್ತರವನ್ನು ಕೊಟ್ಟಿದ್ದು, ಅದನ್ನು ಓದುತ್ತಿದ್ದೇನೆ. ಅಧಿಸೂಚನೆ ಸಂಖ್ಯೆ: ಎಸ್.ವಿ.ಡಿ.–234/ಎಸ್.ಡಿ.ಸಿ.–213/ಬೆಂಗಳೂರು, ದಿ: 03.05.2004 ರಲ್ಲಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಎಲ್ಲಾ ಮಹಾನಗರ ಪಾಲಿಕೆಯ ಆಯುಕ್ತರು, ಎಲ್ಲಾ ನಗರ ಸಭೆಯ ಪೌರ ಆಯುಕ್ತರು, ಎಲ್ಲಾ ಪುರ ಸಭೆ

ಮತ್ತು ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿಗಳು ಸದರಿ ಕಾಯಿದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅಗತ್ಯ ಅಧಿಕಾರಿಯ ಕರ್ತವ್ಯಗಳನ್ನು ಪ್ರತ್ಯಾಯೋಜಿಸಲಾಗಿರುತ್ತದೆ ಹಾಗೂ ಸದರಿ ಕಾಯಿದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಜಿಲ್ಲಾ ಮಟ್ಟದ ಹಾಗೂ ಉಪ ವಿಭಾಗೀಯ ಮಟ್ಟದ ವಿಚಕ್ಷಣಾ ಸಮಿತಿಯನ್ನು ರಚಿಸಿ ಆದೇಶ ಹೊರಡಿಜಸಲಾಗಿರುತ್ತದೆ. 2013 ರಂದು ರಾಜ್ಯದಲ್ಲಿ ಸಕ್ರಿಯಾಗಿ ಅನುಷ್ಠಾನಗೊಳಿಸಲು ರಾಜ್ಯದಲ್ಲಿ ಎಲ್ಲಾ ಅಗತ್ಯ ಕ್ರಮಗಳನ್ನು ವಹಿಸಲಾಗಿರುತ್ತದೆ.

ಅಧ್ಯಕ್ಷರು:– ಒಂದೇ ಒಂದು ನಿಮಿಷ ತಾಳಿ. ಜಿಲ್ಲಾ ಮಟ್ಟದ ವಿಚಕ್ಷಣಾ ಸಮಿತಿ ಮಾಡಿದ್ದು, ಈ ಸಂಬಂಧವಾಗಿ ನಿಮ್ಮ ಜಿಲ್ಲೆಯಲ್ಲಿ ಮೀಟಿಂಗ್ ಆಗಿದೆಯೇ?

ಶ್ರೀ ಬಿ. ರಮಾನಾಥ್ ರೈ:– ಸಮಾಜ ಕಲ್ಯಾಣ ಸಚಿವರ ಉತ್ತರವನ್ನು ಕೊಟ್ಟಿದ್ದು ಅದನ್ನು ಓದಿರುತ್ತೇನೆ.

ಅಧ್ಯಕ್ಷರು:– ಲೋಬೋ ಅವರೆ, ಅವರು ಹೇಳಿಕೆಯನ್ನು ಕೊಟ್ಟಿದ್ದಾರೆ.

ಶ್ರೀ ಜೆ.ಆರ್. ಲೋಬೋ:– ಅವರು ಹೇಳಿರುವ ಉತ್ತರ ಸರಿಯಿಲ್ಲ ಸಾರ್.

ಅಧ್ಯಕ್ಷರು:– ನಾನು ಹೇಳುವವರೆಗೂ ಕೇಳಿ. ನಿಮ್ಮ ಗಮನಕ್ಕೆ ಎಲ್ಲಾದರೂ ಇಂತಹ ಪ್ರಕರಣಗಳು ನಡೆಯುತ್ತಿದ್ದರೆ ಅದನ್ನು ತಿಳಿಸಿ.

ಶ್ರೀ ಜೆ.ಆರ್. ಲೋಬೋ:– 15,375 ಪ್ರಕರಣಗಳು ಕರ್ನಾಟಕದಲ್ಲಿವೆ. ಇಡೀ ರಾಷ್ಟ್ರದಲ್ಲೇ ಕರ್ನಾಟಕ 4 ನೇ ಸ್ಥಾನದಲ್ಲಿದೆ.

ಅಧ್ಯಕ್ಷರು:– ಸ್ವಲ್ಪ ತಾಳಿ ಸ್ವಾಮಿ. ಹಾಗಿದ್ದರೆ ಚರ್ಚೆಗೆ ಅವಕಾಶ ಮಾಡಿ ಕೊಡುತ್ತೇನೆ. ಚರ್ಚೆ ಮಾಡಿ. ಏಕೆಂದರೆ ಜಿಲ್ಲಾಧಿಕಾರಿಗಳು, CSA ಸೇರಿದಂತೆ ಅವರು ದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು:– ಒಬ್ಬ ಜಿಲ್ಲಾಧಿಕಾರಿಯನ್ನಾದರೂ suspend ಮಾಡಿದ್ದೀರಾ?

ಶ್ರೀ ಪ್ರಿಯಾಂಕ ಎಂ. ಖರ್ಗೆ:– ಸಾರ್, manual scavenging ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿಷೇಧವೂ ಕೂಡ ಇದೆ.

ಅಧ್ಯಕ್ಷರು:– ಬೇರೆ ರೀತಿಯ ಚರ್ಚೆಗೆ ಹಾಕಿಕೊಳ್ಳೋಣ.

ಶ್ರೀ ಜೆ.ಆರ್. ಲೋಬೋ:– ಒಂದೇ ಒಂದು ನಿಮಿಷ. . ತಾಳಿ ಸಾರ್, ಚರ್ಚೆಗೆ ಅವಕಾಶ ಕೊಡಿ . . . . ತಲೆಯ ಮೇಲೆ ಮಲ ಹೊರುವ ಪದ್ಧತಿ.

ಅಧ್ಯಕ್ಷರು:– ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಬೇರೆ ರೂಪದಲ್ಲಿ ಹಾಕಿಕೊಂಡು ಚರ್ಚೆ ಮಾಡಿ. ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಯನ್ನು ಈಗ ಮಂಡಿಸಿದ್ದೇವೆ. ಹಾಗಾಗಿ ನಾಳೆಯೇ ಚರ್ಚೆಗೆ ಅವಕಾಶ ಕೊಡುತ್ತೇನೆ. ಚರ್ಚೆ ಮಾಡಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೆ, ಒಂದೇ ಒಂದು ನಿಮಿಷ ಇದರ ಬಗ್ಗೆ ಮಾತನಾಡುತ್ತೇನೆ. ಏಕೆಂದರೆ you are more concerned about it. ಮಾಜಿ ಸಚಿವರಾಗಿದ್ದಂತಹ ಬಿ. ಬಸವಲಿಂಗಪ್ಪನವರಿದ್ದಾಗ ಇಡೀ ದೇಶದಲ್ಲಿ ಮೊಟ್ಟ ಮೊದಲಿಗೆ ಈ ರೀತಿಯ ಅಮಾನುಷವಾದ ರೀತಿಯಲ್ಲಿ ಅಮಾನವೀಯವಾದಂತಹ ಪದ್ಧತಿಯಿದೆ. ತಲೆ ಮೇಲೆ ಮಲ ಹೊರುವ ಪದ್ಧತಿಯನ್ನು ನಿಷೇಧ ಮಾಡಬೇಕೆಂದು ಮಾಡಿರುವುದು ತಮಗೆ ಗೊತ್ತಿದೆ. ಬಹುಶಃ ಭಾರತ ದೇಶದಲ್ಲಿ ಮೊಟ್ಟ ಮೊದಲಿಗೆ ಈ ಪದ್ಧತಿಯನ್ನು ನಿರ್ಮೂಲನ ಮಾಡಿದರು. ಆದರೆ ಮಾನ್ಯ ಸದಸ್ಯರಾದ ಲೋಬೋ ಅವರು ಪ್ರಸ್ತಾಪ ಮಾಡಿದಾಗಲೂ ಕೂಡ ತಲೆ ಮೇಲೆ ಮಲ ಹೊರುವ ಪದ್ಧತಿ ಭಾರತ ದೇಶದಲ್ಲಿ ಕರ್ನಾಟಕ ರಾಜ್ಯವು ನಾಲ್ಕನೇ ಸ್ಥಾನದಲ್ಲಿದ್ದೇವೆ ಎಂದು ಹೇಳಿದರು. ಇದನ್ನು ಜಾರಿಗೆ ತಂದರೂ ಕೂಡ. 4 ನೇ ಸ್ಥಾನದಲ್ಲಿರುವುದು ಬಹಳ ಶೋಚನೀಯವಾದ ಪರಿಸ್ಥಿತಿ. ತಾವು ಹೇಳಿದ ಹಾಗೆ ಚರ್ಚೆ ಮಾಡುವುದಕ್ಕೆ ಹೆಚ್ಚಿನ ಅವಕಾಶವನ್ನು ಕೊಡಿ. ನಾವುಗಳೆಲ್ಲರೂ ಸೇರಿ ಇಲ್ಲಿ ಚರ್ಚೆ ಮಾಡೋಣ.

ಅಧ್ಯಕ್ಷರು:– ಆಯಿತು. ಚರ್ಚೆ ಮಾಡೋಣ. ಲೋಬೋ ಅವರೆ, ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಏಕೆಂದರೆ, ಬಹಳ ಪ್ರಮುಖವಾದ ಮತ್ತು ಮಾನವೀಯತೆಯ ಪ್ರಶ್ನೆ. ಬಸವಲಿಂಗಪ್ಪನವರಿಗೆ ಇಚ್ಛಾ ಶಕ್ತಿಯಿದ್ದ ರೀತಿಯಲ್ಲಿ ಇವರಿಗೆ ಇಲ್ಲ. ಇವರಿಗೆ ಬೇರೆ ರೀತಿಯ ಭಾಷಣ ಮಾಡುವ ಇಚ್ಛಾಶಕ್ತಿಯಿದೆ. ಹಾಗಾಗಿ ನಾನು ಈ ವಿಷಯವನ್ನು ಚರ್ಚೆಗೆ ಹಾಕಿಕೊಳ್ಳುತ್ತೇನೆ. ಆಗ ನೀವು ಎಲ್ಲೆಲ್ಲಿ ಇನ್ನೂ ಆ ರೀತಿಯ ವ್ಯವಸ್ಥೆಯಿದೆ ಎನ್ನುವ ಬಗ್ಗೆ ಗಮನ ಸೆಳೆದರೆ, ಆಗ ಎಷ್ಟು ಜನ ಜಿಲ್ಲಾಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕು, ಎಷ್ಟು ಜನರನ್ನು ಮನೆಗೆ ಕಳುಹಿಸುವ ಬಗ್ಗೆ ವಿಚಾರ ಮಾಡೋಣ. ನಮ್ಮ ವಿವಿಧ ಸರ್ಕಾರದ ಇಲಾಖಾ ಕಾರ್ಯದರ್ಶಿಗಳೇ ಪ್ರತಿ ಜಿಲ್ಲೆಗೂ ಉಸ್ತುವಾರಿ ಇದ್ದಾರೆ. ಆದರೆ ಅವರು ಏನು ಮಾಡುತ್ತಾರೋ ಗೊತ್ತಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ತಾವು ಹೇಳಿದ ಹಾಗೆ ಇದು ಮಾನವೀಯದ ಕಾರಣಗಳಿಗಾಗಿ ಬಹಳ ಮುಖ್ಯವಾದ ವಿಷಯವಾಗಿರುತ್ತದೆ. ವಿಶೇಷವಾಗಿ ಚರ್ಚೆಗೆ ಅವಕಾಶ ಮಾಡಿಕೊಡಿ. ಒಂದೇ ಒಂದು ಮಾತನ್ನು ಹೇಳಬಯಸುತ್ತೇನೆ. ಸಮಾಜ ಕಲ್ಯಾಣ ಜೊತೆಗೆ ನಗರಾಭಿವೃದ್ಧಿ ಇಲಾಖೆ ಮತ್ತು ಪೌರಾಡಳಿತ ಇಲಾಖೆಯನ್ನು ಸೇರಿಸಿಕೊಂಡು ಚರ್ಚೆ ಮಾಡಬೇಕು. ಏಕೆಂದರೆ ಅಲ್ಲೇ ಜಾಸ್ತಿಯಿರುವುದು. ಸಮಾಜ ಕಲ್ಯಾಣ ಇಲಾಖೆ ಒಂದೇ ಸರಿ ಹೋಗುವುದಿಲ್ಲ.

ಅಧ್ಯಕ್ಷರು:– ಮಾಡೋಣ. ಮಲ ಹೊರುವ ಪದ್ಧತಿ ನಿಷೇಧವಾಗಿದೆ. ಆದರೆ ಇನ್ನೂ ಜೀವಂತವಾಗಿದೆ ಎನ್ನುವ ಪ್ರಸ್ತಾವವನ್ನು ಮಾನ್ಯ ಸದಸ್ಯರಾದ ಶ್ರೀ ಜೆ.ಆರ್. ಲೋಬೋ ಅವರು ತಂದಿರುತ್ತಾರೆ. ಅದು ಹಳ್ಳಿಯಲ್ಲಿರಬಹದು, ದಿಲ್ಲಿಯಲ್ಲಿರಬಹುದು ಎಲ್ಲಾದರೂ ಇರಲಿ ಮುಂದೆ ಚರ್ಚೆಗೆ ತೆಗೆದುಕೊಂಡು ಹೇಗೆ ಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನು ನೋಡೋಣ.

ಒಬ್ಬ ಮಾನ್ಯ ಸದಸ್ಯರು:– ಪೌರಾಡಳಿತ ಇಲಾಖೆ ಬೇಡ ಸಾರ್.

ಶ್ರೀ ಜೆ.ಆರ್. ಲೋಬೋ:– ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅರ್ಧ ಗಂಟೆಗಳ ಕಾಲ ಅವಕಾಶ ಕೊಡಬೇಕು.

ಅಧ್ಯಕ್ಷರು:– ಆಯಿತು. ಯು.ಬಿ. ಬಣಕಾರ್ ಅವರು.

10) ವಿಷಯ : ಹಿರೇಕೆರೂರು ತಾಲ್ಲೂಕಿನ ಹಲವು ಗ್ರಾಮಗಳಲ್ಲಿರುವ ಪ್ರಾಥಮಿಕ ಶಾಲೆಗಳಿಗೆ 2015–16 ನೇ ಸಾಲಿನಲ್ಲಿ 40 ಕೊಠಡಿಗಳನ್ನು ಮಂಜೂರು ಮಾಡುವ ಬಗ್ಗೆ.

*****

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು):– ಹಿರೇಕೆರೂರು ಗ್ರಾಮಗಳಲ್ಲಿರುವ ಪ್ರಾಥಮಿಕ ಶಾಲೆಗಳಿಗೆ 2015–16 ನೇ ಸಾಲಿನಲ್ಲಿ 40 ಕೊಠಡಿಗಳನ್ನು ಮಂಜೂರು ಮಾಡುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ವಿನಯ್‌ಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು) (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ.

2015–16 ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಹಿರೇಕೆರೂರು ತಾಲ್ಲೂಕಿನ ಸರಕಾರಿ ಪ್ರಾಥಮಿಕ ಶಾಲೆಗಳಿಗೆ ಅಗತ್ಯವಿರುವ 10 ಹೆಚ್ಚುವರಿ ಕೊಠಡಿಗಳನ್ನು ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ಮಂಜೂರು ಮಾಡುವಂತೆ ಜಿಲ್ಲೆಯಿಂದ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಇದರಲ್ಲಿ ಸದರಿ ತಾಲ್ಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಡೂರು ಇಲ್ಲಿಗೆ 02 ಹೆಚ್ಚುವರಿ ಕೊಠಡಿ ನಿರ್ಮಾಣಕ್ಕೆ ಕೇಂದ್ರ ಸರ್ಕಾರದಿಂದ ಅನುಮೋದನೆ ದೊರೆತಿದೆ. ರಾಜ್ಯವಲಯದಡಿ ಅನುದಾನದ ಲಭ್ಯತೆ ಮತ್ತು ಅಗತ್ಯತೆಯನ್ನು ಆಧರಿಸಿ ಕ್ರಮವಹಿಸಲಾಗುವುದು.